

ಡಾ.ವಿನೋದ ಛೆಬ್ಬಿ

'ನನ್ನ ದುಃಖ ನನಗಿರಲಿ, ಸುಖ ಮಾತ್ರ ಕೊಡುವೆ' ಎನ್ನುವುದು ಅನ್ಯೋನ್ಯತೆಯ ಲಕ್ಷಣವಲ್ಲ!

# 352: ಹೊಸ ದಾರಿ - 92

ದಾಂಪತ್ಯದಲ್ಲಿ ಸೀಮಾರೇಖೆಯ ಅಸ್ತಿತ್ವ ಸ್ವಂತಿಕೆ ಹಾಗೂ ಸಂಬಂಧಗಳ ಸಮಜೋಡಣೆಯ ಸಾಧ್ಯತೆಯ ಬಗೆಗೆ ಹೊದಸಲ ಚಿಂತನೆ ಶುರುಮಾಡಿದ್ದೆವು. ತಪ್ಪನ್ನು ಸರಿಪಡಿಸಿದರೆ ತಪ್ಪು ತಿದ್ದಿದಂಥ ದಾಂಪತ್ಯವಾಗುತ್ತದೆಯೇ ಹೊರತು ಅನ್ಯೋನ್ಯತೆಯ ದಾಂಪತ್ಯ ಆಗಲಾರದು; ಅದಕ್ಕಾಗಿ ತನ್ನನ್ನೇ ಬಿಚ್ಚುಭಾವದಿಂದ ತೆರೆದಿಟ್ಟು ಸ್ವೀಕೃತಿಗೆ ಕಾಯುವ ಧೈರ್ಯ ಮಾಡಬೇಕಾಗುತ್ತದೆ ಎಂದು ಸಂಕೇತ–ಶಾಂತಿ ದಂಪತಿಯನ್ನು ಉದಾಹರಿಸಿ ಹೇಳಿದ್ದೆ. ದಾಂಪತ್ಯದಲ್ಲಿ ಅನ್ಯೋನ್ಯತೆಗೆ ಮೊದಲ ಅಡ್ಡಿ ಎಂದರೆ, ವೈಯಕ್ತಿಕ ದೋಷ–ದೌರ್ಬಲ್ಯಗಳು ಕಂಡಾಗ ಅದರ ಹೊಣೆ ಹೊರದಿರುವುದು ಒಂದು ಕಾರಣ ಎಂಬುದು ಸ್ಪಷ್ಟವಾಯಿತು. ಇನ್ನಿತರ ಕಾರಣಗಳ ಮೇಲೆ ಕಣ್ಣು ಹಾಯಿಸೋಣ.

ಅನೇಕರು ತಮ್ಮ ದೋಷ–ದೌರ್ಬಲ್ಯಗಳ ಅರಿವಾದಾಗ ಏನು ಮಾಡುತ್ತಾರೆ? ತಾನು ಹಾಗಲ್ಲವೆಂದೋ, ತನ್ನ ಉದ್ದೇಶ ಹಾಗಿಲ್ಲವೆಂದೋ, ಕೇಳುವವರೇ ತಪ್ಪು ತಿಳಿದಿದ್ದಾರೆಂದೋ ಹೇಳುತ್ತ ತಾನು ಸರಿಯೆಂದೇ ಸಾಧಿಸುತ್ತಾರೆ; ಯಾಕೆ? ಸತ್ಯದೆದುರು ನಿಂತುಕೊಳ್ಳುವಷ್ಟು ಬಲ ಅವರ ಸ್ವಂತಿಕೆಗೆ ಇರುವುದಿಲ್ಲ. ಆದರೆ ಸತ್ಯವೇ ಮೈಮೇಲೆ ಬಂದು ಬಿದ್ದರೆ? ಹೀಗೆನ್ನುವಾಗ ಧಾರಿಣಿ (ನಿಜನಾಮವಲ್ಲ) ನೆನಪಾಗುತ್ತಿದ್ದಾಳೆ. ಧಾರಿಣಿಯು ತನ್ನ ಗಂಡ ತನ್ನನ್ನು ಪ್ರೀತಿಸುತ್ತಿಲ್ಲ, ಹಾಗೂ ಇನ್ನೊಬ್ಬಳ ಬೆನ್ನುಬಿದ್ದು ಖರ್ಚುಮಾಡುತ್ತಿದ್ದಾನೆ ಎಂದು ಸಂದೇಹಿಸುತ್ತಿದ್ದಳು. ಆಗ ಗಂಡ ನಿರ್ಧರಿಸಿದ: ಇನ್ನುಮೇಲೆ ಪ್ರತಿದಿನವೂ ತನ್ನ ಗಳಿಕೆಯನ್ನು ಹೆಂಡತಿಯ ಕೈಯಲ್ಲಿಡಬೇಕು, ಹಾಗೂ ತನ್ನ ನಿತ್ಯದ ಖರ್ಚಿಗೆ ಅವಳೇ ಕೊಡಬೇಕು. ತಿಂಗಳ ಕೊನೆಗೆ ಅವನಿಂದ ಒಂದು ಸಾವಿರದ ಲೆಕ್ಕ ಸಿಗದಿದ್ದಾಗ ಇವಳ ಸಂದೇಹಕ್ಕೆ ಪುರಾವೆ ಸಿಕ್ಕಿತು. ಗಂಡನನ್ನು ನಂಬಲರ್ಹನಲ್ಲವೆಂದು ಹಣೆಪಟ್ಟಿ ಕಟ್ಟಿ ದೂರೀಕರಿಸಿದಳು. ಅವನು ಸಾಕಷ್ಟು ತಲೆಕೆಡಿಸಿಕೊಂಡ ನಂತರ ನೆನಪಾಯಿತು: ವಾರಾಂತ್ಯ ಕುಟುಂಬದವರೆಲ್ಲ ಹೊರಗೆ ಊಟಮಾಡಿದಾಗ ಅವನೇ ಹಣ ಪಾವತಿಸಿದ್ದ! ತನ್ನ ತರ್ಕ ತಲೆಕೆಳಗಾದಾಗ ಇವಳೇನು ಮಾಡಿದಳು? ತಲೆತಗ್ಗಿಸಿ ಗಂಡನನ್ನು ಸಮೀಪಿಸುವುದರ ಬದಲು ಎಲ್ಲರೆದುರು ದೊಡ್ಡ ಗಂಟಲಲ್ಲಿ ಸಿಡುಕಿದಳು: 'ನನ್ನಿಂದ ದೊಡ್ಡ ತಪ್ಪಾಯಿತು! ಇನ್ನುಮೇಲೆ ನಿಮ್ಮ ಲೆಕ್ಕಪತ್ರ ನೀವೇ ಇಟ್ಟುಕೊಳ್ಳಿ, ನಿಮ್ಮ ಗೊಡವೆಯೇ ಬೇಡ!' ಎಂದು ಲೆಕ್ಕದ ಪುಸ್ತಕ ಬಿಸಾಕಿ ದೂರವಾದಳು (ಗಮನಿಸಿ: 'ನಿಮ್ಮ' ಗೊಡವೆ ಬೇಡ ಎಂದಿದ್ದಾಳೆ). ಸಂದೇಹ ದೂರವಾದರೂ ಸಮೀಪ ಆಗದಿರುವುದಕ್ಕೆ ಕಾರಣ ಯೋಚಿಸಿದರೆ ಮನದ ಇನ್ನೊಂದು ಪದರ ತೆರೆದುಕೊಳ್ಳುತ್ತದೆ: ಅಲ್ಲಿರುವುದು ಸಮೀಪಿಸುವ, ಸ್ಪಂದನೆಗೆ ಪ್ರತಿಸ್ಪಂದಿಸುವ ಬಯಕೆಯಲ್ಲ; ಹೊರತಾಗಿ ಯಾವುದೋ ನೆಪದಿಂದ ದೂರೀಕರಿಸುವುದು. ಹೀಗೇಕೆ? ಸುಸಂಬಂಧ ಬಯಸುವ ಅನೇಕರು ಪ್ರೀತಿಸುವುದಕ್ಕೆ, ಹತ್ತಿರವಾಗುವುದಕ್ಕೆ ಹಿಂಜರಿಯುತ್ತಾರೆ, ಯಾಕೆಂದರೆ, ಹತ್ತಿರವಾಗುವಾಗ ತನ್ನ ದೋಷ–ದೌರ್ಬಲ್ಯಗಳೂ ಢಾಳಾಗಿ ಕಾಣುತ್ತವೆ. ಇದೇ ಕಾರಣದಿಂದ ತಿರಸ್ಕರಿಸಲ್ಪಟ್ಟರೆ? ('ನೀನು ಹೀಗಿದ್ದೀಯಾ ಎಂದು ಗೊತ್ತಿದ್ದರೆ ನಿನ್ನನ್ನು ಕಟ್ಟಿಕೊಳ್ಳುತ್ತಲೇ ಇರಲಿಲ್ಲ!') ಹಾಗಾಗಿ, ತನ್ನ ಬಗೆಗೆ ಸದಭಿಪ್ರಾಯ ಇರುವಾಗಲೇ ಅಂತರ ಇಟ್ಟುಕೊಳ್ಳುವುದು ಸುರಕ್ಷಿತ! ನೆನಪಿಡಿ: ಇದು ಗಡಿ ಕಾಪಾಡಿಕೊಳ್ಳುವುದಲ್ಲ; ಗಡಿದಾಟಿ ಸ್ನೇಹಹಸ್ತಕ್ಕೆ ಚಾಚುವುದಕ್ಕೆ ಹಿಂಜರಿಕೆಯ ಸಂಕೇತ. ಹಾಗಾಗಿ ಅನ್ಯೋನ್ಯತೆ ಅಸಾಧ್ಯವಾಗುತ್ತದೆ.

ಸಂಕೇತ, ಧಾರಿಣಿಯಂಥವರಲ್ಲಿ ಸ್ನೇಹಕ್ಕೆ ಹಿಂಜರಿಯುವ ಸ್ವಭಾವ ಹೇಗೆ ಸೇರಿಕೊಂಡಿತು? ಬಾಲ್ಯದಲ್ಲಿ ತಾಯ್ತಂದೆಯರು ಇವರ ದೋಷ–ದೌರ್ಬಲ್ಯಗಳನ್ನು ಮಾನವಸಹಜ ಎಂದು ಒಪ್ಪಿಕೊಳ್ಳದೆ ಪರಿಪೂರ್ಣತೆಗೆ ಬಲಾತ್ಕರಿಸಿದ್ದಾರೆ. ಮನಸ್ಸು ಮುರಿಯುವ ತನಕ ತಿದ್ದಿದ್ದಾರೆ. (ತಾಯ್ತಂದೆಯರು ಹೀಗೇಕೆ ವರ್ತಿಸುತ್ತಾರೆ? ಅವರ ತಾಯ್ತಂದೆಯರೂ ಇದನ್ನೇ ಹೇಳಿಕೊಟ್ಟಿರುತ್ತಾರೆ!) ಆಗ ಮಗುವು 'ಅಸಾಮರ್ಥ್ಯ' ತೋರಿಸಿದರೆ ಬದುಕುವುದೇ ಕಷ್ಟವಾಗುತ್ತದೆ. ಹಾಗಾಗಿ ಅದು ಗುರಿ ಸಾಧಿಸಿದಂತೆ ತೋರಿದರೂ ವೈಯಕ್ತಿಕ ದೋಷಗಳನ್ನು ಮುಚ್ಚಿಡಲು ಕಲಿಯುತ್ತದೆ. ಇದು ಬೆಳೆದಮೇಲೂ ಮುಂದುವರಿಯುತ್ತದೆ. ಉದಾಹರಣೆಗೆ, ಬಾಲಕಿ ಧಾರಿಣಿ ಪರೀಕ್ಷೆಯಲ್ಲಿ ಶೇ.95 ಪಡೆದರೂ ಗೆಳತಿಯನ್ನು (ಶೇ.97) ಮೀರಿಸುವ ಪ್ರಯತ್ನ ಮಾಡದಿದ್ದುದಕ್ಕೆ ಅವಮಾನಕ್ಕೆ ಒಳಗಾಗಿದ್ದಿದೆ. ಆಗವಳು ಗೆಳತಿಯು ಪರೀಕ್ಷೆಯಲ್ಲಿ ನಕಲು ಹೊಡೆದಿದ್ದಾಳೆಂದು ಆಪಾದಿಸಿದ್ದಾಳೆ. ಹೀಗೆ ತನ್ನ ಉಳಿವಿನ ಹೋರಾಟದಲ್ಲಿ ಆತ್ಮೀಯರನ್ನು ಪರಕೀಯರನ್ನಾಗಿ ಗಣಿಸುತ್ತಿದ್ದರೆ ಅನ್ಯೋನ್ಯತೆ ಸಾಧ್ಯವಾಗುವುದಾದರೂ ಹೇಗೆ?

ಅದೇನೋ ಸರಿ, ಆದರೆ ಅದೆಲ್ಲ ಬಾಲ್ಯದಲ್ಲಾಯಿತು. ಈಗ ಪ್ರಬುದ್ಧತೆ ಬೆಳೆದಿದೆ; ನನ್ನದೇ ದೋಷಗಳಿಂದ ಅನ್ಯೋನ್ಯತೆಗೆ ಧಕ್ಕೆಯಾಗುತ್ತಿದೆ ಎಂದು ಗೊತ್ತಾಗುತ್ತಿದೆ. ಆದರೂ ತಿದ್ದಿಕೊಳ್ಳಲು ಯಾಕಾಗುವುದಿಲ್ಲ? ಉತ್ತರ ಸರಳ. ಈಗ ದೋಷಗಳಿಗೆ ಯಾರೂ ಶಿಕ್ಷಿಸುವುದಿಲ್ಲ ಎನ್ನುವ ಅನಿಸಿಕೆ ತಾರ್ಕಿಕವಷ್ಟೆ; ತರ್ಕಬುದ್ಧಿಗೆ 'ಹಿಂದೆ–ಈಗ–ಮುಂದೆ' ಎನ್ನುವ ಕಾಲದ ಪರಿವೆಯಿದೆ. ಆದರೆ ಬಾಲ್ಯದಲ್ಲಾದ ತುಚ್ಛೀಕರಣ, ಅವಹೇಳನ, ಕೀಳರಿಮೆ ಮುಂತಾದ ಭಾವನೆಗಳು ಕಾಲಾತೀತ. ಯಾಕೆ? ಈ ಭಾವಗಳು ಕಾಲದಲ್ಲಾಗಲೀ ಮನದಲ್ಲಾಗಲೀ ಅಲ್ಲ, ಮೈಯಲ್ಲಿ ಸಂಗ್ರಹವಾಗಿರುತ್ತವೆ! (ಇದರ ಬಗೆಗೆ ಬಹಳಷ್ಟು ತಿಳಿದುಕೊಳ್ಳುವುದಿದೆ). ಹಾಗಾಗಿ, ಬೆಳೆದ ಮೇಲೂ ಬಾಲ್ಯವನ್ನು ನೆನಪಿಸುವ ಪ್ರಸಂಗ ಬಂದರೆ ಸಾಕು, ನೇತ್ಯಾತ್ಮಕ ಭಾವಗಳು ಮೈಯೊಳಗೆ ಉಕ್ಕೇರಿ, ಕಟ್ಟೆಯೊಡೆದು ಹರಿದು ಮನದ ತರ್ಕವನ್ನು ಮುಳುಗಿಸಿಬಿಡುತ್ತವೆ. ಪರಿಣಾಮ? ನನಗೆ ಯಾರೂ ಬೇಡ, ನನ್ನ ಪಾಡಿಗೆ ನಾನಿದ್ದರೆ ಸಾಕು! ಇದರರ್ಥವೇನು? ದೂರ ಸರಿಯುವ ಹವಣಿಕೆ ಸಂಗಾತಿಯ ದೆಸೆಯಿಂದಲ್ಲ, ಬದಲಾಗಿ ತನ್ನೊಳಗೆ ಮರುಕಳಿಸುತ್ತಿರುವ ಅಲ್ಪತನದಿಂದ – ಅಂದರೆ, ನಿನ್ನನ್ನು ತಿರಸ್ಕರಿಸುತ್ತಿಲ್ಲ, ನನ್ನನ್ನೇ ನಾನು ತಿರಸ್ಕರಿಸುತ್ತಿದ್ದೇನೆ!

ಸಂಗಾತಿಯೊಡನೆ ಮನಸ್ಸು ಬಿಚ್ಚುವುದಕ್ಕೆ ಹಿಂಜರಿಕೆಯಲ್ಲದೆ ಇನ್ನೂ ಕೆಲವು ಅಂಶಗಳು ಅಡ್ಡಿಯಾಗುತ್ತವೆ. ತನ್ನ ದೋಷ–ದೌರ್ಬಲ್ಯಗಳು ಗೊತ್ತಾದಾಗ ಸಂಗಾತಿಯು ಕೊರಗಬಹುದು, ಅಥವಾ ತನ್ನ ವಿರುದ್ಧವೇ ಉಪಯೋಗಿಸಬಹುದು. ಉದಾಹರಣೆಗಾಗಿ, ಶಾಂತಿಯ ತಾಯಿಯು ಕೆಲವೊಮ್ಮೆ ಮಗನಿಗೆ ಸೂಕ್ಷ್ಮವಾಗಿ ಮಹತ್ವ ಕೊಟ್ಟಿದ್ದರಿಂದ ಶಾಂತಿ ಎರಡನೆಯ ಸ್ಥಾನಕ್ಕೆ ಹೋಗಿದ್ದಾಳೆ. ಆಗಾದ ಅನಾಥಭಾವವನ್ನು ಸಂಕೇತನೊಡನೆ ಹಂಚಿಕೊಂಡಾಗ ಅವನು ಸಾಂತ್ವನ ಮಾಡಿದ್ದಾನೆ. ಹೇಗೆ? 'ಹೌದೆ? ನಿನ್ನ ತಾಯಿಯನ್ನು ಮರೆತುಬಿಡು, ಇನ್ನೇನು ನಾನಿದ್ದೇನಲ್ಲ? ಇನ್ನುಮೇಲೆ ತವರಿಗೆ ಅದಷ್ಟು ಹೋಗಬೇಡ!' ಇದರಿಂದ ಶಾಂತಿಗೆ ನೆಮ್ಮದಿ ಒತ್ತಟ್ಟಿಗಿರಲಿ, ಸಂಕಟ ಹೆಚ್ಚಾಗಿದೆ. ಯಾಕೆ? ಒಂದು: ಶಾಂತಿ ಹೇಳಿಕೊಂಡಿರುವುದು ದುಃಖ ಹಗುರ ಮಾಡಿಕೊಳ್ಳಲಿಕ್ಕೇ ಹೊರತು ಸಮಸ್ಯೆಯ ಪರಿಹಾರ ಕೇಳಲಿಕ್ಕಲ್ಲ; ಎರಡು: ತಾಯಿಯ ಸ್ಥಾನವನ್ನು ಸಂಕೇತ ತಾನೇ ತುಂಬಲು ಹೊರಟಿದ್ದಾನೆ – ಇದು ಅಸಾಧ್ಯವೆಂದು ಎಂಥವರಿಗೂ ಗೊತ್ತಾಗುತ್ತದೆ; ಮೂರು: ತವರಿಗೆ ಹೋಗುವುದರ ಮೇಲೆ ಸೂಕ್ಷ್ಮ ನಿಷೇಧ ಹೇರುವುದು – ಇದು ನಿಜವಾಗಿಯೂ ಕಳವಳಕಾರಿ.

ಇನ್ನು ಕೆಲವರಿಗೆ ಹಂಚಿಕೊಳ್ಳುವುದು ಹೇಗೆಂದೇ ಗೊತ್ತಿರುವುದಿಲ್ಲ – ಇದರಲ್ಲಿ ಗಂಡಸರೇ ಹೆಚ್ಚು. 'ಗಂಡಸಾಗಿ ಹೆಣ್ಣಿನೊಡನೆ ಕಷ್ಟ ಹೇಳಿಕೊಳ್ಳುವುದೆ? ಛೆ! ದುಃಖ ನನಗಿರಲಿ, ಸುಖ ಮಾತ್ರ ಕೊಡುವೆ' ಎನ್ನುವ ಮನೋಭಾವವು ಸಾರ್ವತ್ರಿಕವಾಗಿದೆ. ಉದಾಹರಣೆಗೆ, ಉದ್ಯೋಗದಲ್ಲಾದ ಯಶಸ್ಸನ್ನು ಹೇಳಿಕೊಳ್ಳುತ್ತಾರೆಯೇ ಹೊರತು ಮೇಲಧಿಕಾರಿ ಬಯ್ದದ್ದನ್ನಲ್ಲ. ತೃಪ್ತಿಕರ ಕಾಮಕೂಟದ ನಂತರ ಮಾತಾಡುವಂತೆ ಅತೃಪ್ತ ಕೂಟದ ಬಗೆಗೆ ಮಾತಾಡಲಾರರು. ಇದು ಪುರುಷಪ್ರಧಾನ ಮೂಲದಿಂದ ಬಂದಿದೆಯೆಂದು ಹೇಳಬೇಕಾಗಿಲ್ಲ. ಪುರುಷಪ್ರಧಾನ ನಡವಳಿಕೆಯು ಅಸಮಾನತೆಯನ್ನು ಪ್ರೋತ್ಸಾಹಿಸುವುದರಿಂದ ಅನ್ಯೋನ್ಯತೆ ಸಾಧ್ಯವಿಲ್ಲ. ಫಲಶ್ರುತಿ? ಬಹುಕಾಲದ ಸುಖದಾಂಪತ್ಯದಲ್ಲೂ ಒಬ್ಬರಿಗೊಬ್ಬರು ಅಪರಿಚಿತರಾಗಿಯೇ ಉಳಿಯುತ್ತಾರೆ!

ಹಾಗಾದರೆ ಅನ್ಯೋನ್ಯತೆ ಮರೀಚಿಕೆಯೆ? ಮುಂದೆ ನೋಡೋಣ.

**ಸಂಪರ್ಕಕ್ಕೆ: 8494933888;**
**Email: vinod.chebbi@gmail.com**